ಮನ್ನಾರು ಕೃಷ್ಣಗೆ ಮಂಗಳ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page no. 149.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page no. 373.
3. **Note:** This song is not available in the books of Pavanje Guru Rao.
4. **Note:** The wordings, given without highlights, are as per book in Ref. 1. The wordings in book in Ref. 2 and that of the singer are matching and the differences are marked in yellow highlights.

ರಾಗ: ತೋಡಿ ತಾಳ: ಆದಿ

ಮನ್ನಾರು ಕೃಷ್ಣಗೆ ಮಂಗಳ
ಜಗವ ಮನ್ನಿಸಿದೊಡೆಯಗೆ ಮಂಗಳ ॥ ಪ ॥

ಬೊಮ್ಮನ ಪಡೆದಗೆ ಭಕ್ತರುದ್ಧಾರಿಗೆ
ಕಮ್ಮಗೋಲನಯ್ಯಗೆ ಮಂಗಳ
ಧರ್ಮ ಸಂರಕ್ಷಕನಿಗೆ ದಾನವ ಶಿಕ್ಷಗೆ
ನಮ್ಮ ರಕ್ಷಕನಿಗೆ ಮಂಗಳ ॥ ೧ ॥

ತುರುಗಳ ಕಾಯ್ದಗೆ ಕರುಣಾಕರನಿಗೆ
(ಗಿರಿಯನೆತ್ತಿದವಗೆ) (ಗಿರಿಯನೆತ್ತಿದನಿಗೆ) ಮಂಗಳ
(ವರದ) (ಪುರದ) ತಿಮ್ಮಪ್ಪಗೆ ವಾರಿಜನಾಭಗೆ
ಹರಿ ಸರ್ವೋತ್ತಮನಿಗೆ ಮಂಗಳ ॥ ೨ ॥

ದೇವಕಿ ದೇವಿಯ ತನಯಗೆ ಮಂಗಳ
ದೇವ ತಿಮ್ಮಪ್ಪಗೆ ಮಂಗಳ
ಮಾವನ ಕೊಂದು ಮಲ್ಲರ ಮಡುಹಿದ
ಪುರಂದರ ವಿಠಲಗೆ ಮಂಗಳ ॥ ೩ ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಮನ್ನಾರು – ಮನೋಹರ

ಬೊಮ್ಮನ... – ಚತುರ್ಮುಖ ಬ್ರಹ್ಮನನ್ನು ತನ್ನ ನಾಭಿಕಮಲದಿಂದ ಹೊರಹೊಮ್ಮಿಸಿದವನು ನಾರಾಯಣ.

ಕಮ್ಮಗೋಲನ ಅಯ್ಯ – ಕಮ್ಮಗೋಲನ್ನು ಎಂದರೆ ಕಂಪುಳ್ಳ ಬಾಣವನ್ನು (ಕಮ್ಮು, ಕಂಪು, ಸುವಾಸನೆ, ಹೂಗಳು) ಹಿಡಿದವನು ಮನ್ಮಥ; ಅವನ ಅಯ್ಯನೆಂದರೆ ತಂದೆ, ನಾರಾಯಣ.

ಧರ್ಮ ರಕ್ಷಕನಿಗೆ... – ಭಗವದ್ಗೀತೆಯಲ್ಲಿರುವ 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' ॥ ಎಂಬ ಮಾತಿನ ಆಧಾರ.

ಮಾವನ ಕೊಂದು... – ಮಧುರೆಯಲ್ಲಿ ಕಂಸನನ್ನು ಕೊಂದು, ಅವನು ಕಳುಹಿಸಿದ ಚಾಣೂರ ಮೊದಲಾದ ಮಲ್ಲರನ್ನು ಕೊಂದವನು, ಕೃಷ್ಣ.

ತನಯ = ಮಗ

Classification: Keerthane
Ankita: purandara vittala
Location: Mannaru Gudi, near Tanjavoor, Tamil Nadu. The temple is of Raja Gopala Krishna. In Gopala Murthy there are three types: Venugopala, Rajagopala, Madanagopala. This Rajagopala is holding whip in one hand and a stick in the other hand. The murthy is very beautiful and is special. Hence, Purandara Dasa specifically mentions: "turugala kaida..." in this song.
Category: Mangala Song, Pooja Tatva.
Sub-Category: Krishna, mannaru, Devaki, deva, devi, srinivasa, kamsa, dharma, asura,
Pravachana: NA
Explanation: NA